ಮೂಲ ದಾವಾ ನಂಃ 116/2015

ಡಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **17-02-2024** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಎಸ್.ಬಿ ವಕೀಲರಿಂದಃ**

ನಾನು ಈಗ ಪ್ರಸ್ತುತವಾಗಿ ಶಿರಸಿಯಲ್ಲಿ ವಾಸವಿದ್ದೇನೆ. ನಾನು ಶಿರಸಿಯಲ್ಲಿ ಸುಮಾರು 30 ವರ್ಷಗಳಿಂದ ವಾಸವಾಗಿದ್ದೇನೆ. ಈ ದಾವೆಯಲ್ಲಿ ಉದಾಹರಣೆಯನ್ನು ಸಲ್ಲಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿದ್ದೇನೆ. ನನ್ನ ಅಜ್ಜನಿಗೆ ಇಬ್ಬರು ಸಹೋದರರು. ಅವರ ಹೆಸರು ಶಂಭು ಹಾಗೂ ಪರಮೇಶ್ವರ ಆಗಿದೆ. ನನ್ನ ಅಜ್ಜ ಹಾಗೂ ಅವರ ಸಹೋದರರ ನಡುವೆ ಯಾವಾಗ ವಾಂಟಣಿ ಆಗಿದೆ ಎಂಬುದನ್ನು ಹೇಳಲು ನನಗೆ ಈಗ ಆಗುವುದಿಲ್ಲ, ಆದರೆ ಸದರಿ ವಾಂಟಣಿಯು ನೊಂದಾಯಿತ ವಾಂಟಣಿ ಆಗಿರಬಹುದು. ಸದರಿ ವಾಂಟಣಿಯ ಪ್ರಕಾರ ನನ್ನ ಅಜ್ಜನಿಗೆ ಸರ್ವೇ ನಂಬರ್ 336 ಹಿಸ್ಸಾ 5 ರಿಂದ 339 ಹಿಸ್ಸಾ 10 ರ ವರೆಗೆ ಬಂದಿರಬಹುದು. ನನ್ನ ಅಜ್ಜನಿಗೆ ಒಟ್ಟು 10 ಸರ್ವೇ ನಂಬರಗಳ ಆಸ್ತಿಗಳಲ್ಲಿ ಹಕ್ಕು ಪ್ರಾಪ್ತವಾಗಿರಬಹುದು. ಸದರಿ ಸರ್ವೇ ನಂಬರಗಳು 334, 335 ಹಾಗೂ 339 ಆಗಿದೆ.

ನನ್ನ ಅಜ್ಜನಿಗೆ ಸದರಿ ಆಸ್ತಿಗಳಿಂದ ಒಟ್ಟು 39 ಗುಂಟೆ ಕ್ಷೇತ್ರವು ಪ್ರಾಪ್ತವಾಗಿದೆ. ನನ್ನ ತಿಳುವಳಿಕೆಯಲ್ಲಿ ನನ್ನ ಅಜ್ಜನಿಗೆ 39 ಗುಂಟೆಗಿಂತ ಹೆಚ್ಚಿನ ಆಸ್ತಿ ಬಂದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಅಜ್ಜನು ಯಾವಾಗ ತೀರಿ ಹೋಗಿದ್ದಾರೆ ಎಂಬುದು ನನಗೆ ಗೊತ್ತಿಲ್ಲ , ಆದರೆ ಮಣಿಪಾಲ ಆಸ್ಪತ್ರೆಯಲ್ಲಿ ತೀರಿ ಹೋಗಿದ್ದಾರೆ. ನನ್ನ ತಂದೆಯವರು ತೀರಿ ಹೋಗಿ 6 ವರ್ಷ ಆಯಿತು. ನಮ್ಮ ತಂದೆಯವರು ತೀರಿಕೊಳ್ಳುವ ಮೊದಲೇ ಅವರ ಹೆಸರಿನಲ್ಲಿದ್ದ ಆಸ್ತಿಯನ್ನು ನಾವು ನಮ್ಮ ಪಕ್ಕದ ಮನೆಯವರಿಗೆ ಮಾರಾಟ ಮಾಡಿದ್ದೇವೆ , ಹಾಗೂ ಸಬ್ ರಿಜಿಸ್ಟ್ರಾರ್ ಕಚೇರಿಗೆ ಬಂದು ಸಹಿ ಮಾಡಿದ್ದೇವೆ. ನನ್ನ ಅಜ್ಜ ತೀರಿಕೊಂಡ ನಂತರ ಸರ್ವೇ ನಂಬರ್ 334, 335 ಹಾಗೂ 339 ರ ಆಸ್ತಿಗಳು ನನ್ನ ತಂದೆ ಹೆಸರಿಗೆ ಬಂದಿವೆ.

ನನ್ನ ಅಜ್ಜ ತೀರಿಕೊಂಡ ನಂತರ ಅವರ ಮಕ್ಕಳ ನಡುವೆ ಒಮ್ಮತದಿಂದ ಮೌಖಿಕವಾಗಿ ವಾಂಟಣಿ ಆಗಿದ್ದು , ಅದರಂತೆ ಅವರಿಗೆ ಹಕ್ಕುಗಳು ಪ್ರಾಪ್ತವಾಗಿದೆ. ಅದು ಅಂದಾಜು 10 ವರ್ಷದ ಹಿಂದೆ ವಾಂಟಣಿ ಆಗಿರಬಹುದು. ಸದರಿ ವಾಂಟಣಿಯನ್ನು ಪತ್ರಿಕೆಯಲ್ಲಿ ಬರೆದಿಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ವಾಂಟಣಿ ಅನುಸಾರವಾಗಿ ಯಾವ ಯಾವ ಸರ್ವೇ ನಂಬರಗಳು ಯಾರ ಯಾರಿಗೆ ಹೋಗಿದೆ ಎಂಬುದರ ಬಗ್ಗೆ ಈಗ ನನಗೆ ಹೇಳಲು ಆಗುವುದಿಲ್ಲ. ಸದರಿ ಸರ್ವೇ ನಂಬರ್ 336 ಹಿಸ್ಸಾ 10, 339 ಹಿಸ್ಸಾ 15 ರ ಆಸ್ತಿಗಳು ನನ್ನ ತಂದೆಯ ಸಹೋದರನಾದ ನಾರಾಯಣ ಅವರಿಗೆ ಬಂದಿವೆ. ಸದರಿ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕಿಲ್ಲ. ಅದರಂತೆ ಸದರಿ ವಾಂಟಣಿಯ ಪ್ರಕಾರ ನನ್ನ ತಂದೆಯ ಹಿಸ್ಸೆಗೆ ಯಾವ ಯಾವ ಸರ್ವೇ ನಂಬರಗಳ ಆಸ್ತಿ ಬಂದಿದೆ ಎಂಬುದು ನನಗೆ ಗೊತ್ತಿಲ್ಲ. ನಾನು ದಾವೆಯನ್ನು ಹೂಡಿದ ನಂತರ ನನ್ನ ತಂದೆಯ ಹಕ್ಕಿಗೆ ಯಾವ ಯಾವ ಆಸ್ತಿ ಬಂದಿದೆ ಎಂಬುದನ್ನು ದಾಖಲೆಗಳನ್ನು ತೆಗೆಸಿ ನೋಡಿರುವುದಿಲ್ಲ. ನನ್ನ ತಂದೆಯ ಇನ್ನೊಬ್ಬ ಸಹೋದರನಾದ 2 ನೇ ಪ್ರತಿವಾದಿಗೆ ಯಾವ ಯಾವ ಆಸ್ತಿ ಬಂದಿದೆ ಎಂಬುದು ನನಗೆ ಗೊತ್ತಿಲ್ಲ.

ನನ್ನ ತಂದೆಯವರ ಜೀವಿತ ಕಾಲದಲ್ಲಿ ಅವರ ಸಹೋದರರಾದ ರಾಮಾ , ನಾರಾಯಣ , ಹಾಗೂ ನನ್ನ ಅತ್ತೆಯಾದ ಶೋಭಾ ರವರ ನಡುವೆ ವಾಂಟಣಿ ಆಗಿದೆ. ನನ್ನ ಅತ್ತೆ ಶೋಭಾ ರವರಿಗೆ ಯಾವ ಸರ್ವೇ ನಂಬರಗಳು ಬಂದಿವೆ ಎಂಬುದು ನನಗೆ ಗೊತ್ತಿಲ್ಲ. ಅವರು ಸದರಿ ವಾಂಟಣಿಯಲ್ಲಿ ಪಕ್ಷಗಾರರಾದ ಬಗ್ಗೆ ನನಗೆ ಮಾಹಿತಿ ಇಲ್ಲ. ಶೋಭಾ ರವರು

ನನ್ನ ಅಜ್ಜನ ಮಗಳು ಎಂಬುದ್ದಕ್ಕಾಗಿ ಅವರ ಆಧಾರ ಕಾರ್ಡ ಹಾಗೂ ಟಿ.ಸಿ ಯನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ನನ್ನ ಅತ್ತೆ ಶೋಭಾ ರವರ ಗಂಡನ ಹೆಸರು ಪ್ರಭಾಕರ ಭಟ್ಟ . ನನ್ನ ಅತ್ತೆಯ ಮೂಲ ಹೆಸರು ಮಾದೇವಿ ಆಗಿದ್ದು , ಅದರಂತೆಯೇ ಟಿ.ಸಿ ಯಲ್ಲಿ ಇರುತ್ತದೆ. ಅವರು ಮದುವೆ ಆದ ನಂತರ ಅವರ ಹೆಸರು ಶೋಭಾ ಎಂದು ಬದಲಾಗಿರುತ್ತದೆ. ನನ್ನ ಅತ್ತೆಯು ಮದುವೆ ಆದ ವರ್ಷ ನನಗೆ ಗೊತ್ತಿಲ್ಲ.

ಮಾದೇವಿ ಎಂಬ ಹೆಸರು ಮದುವೆ ಆದ ಬಗ್ಗೆ ಶೋಭಾ ಎಂದು ಬದಲಾವಣೆ ಆದ ಬಗ್ಗೆ ನಿಮ್ಮ ಹತ್ತಿರ ದಾಖಲೆ ಇದೆಯಾ ಎಂದು ಕೇಳಿದಾಗ , ಸಾಕ್ಷಿಯು ಆಧಾರ ಕಾರ್ಡ ಇದೆ ಎಂಬುದಾಗಿ ನುಡಿದಿದ್ದಾರೆ. ನಿಡಿ 1 ಹಾಗೂ ನಿಡಿ 2 ರ ದಾಖಲೆಗಳು ಒಬ್ಬನೇ ವ್ಯಕ್ತಿಗೆ ಸಂಬಂಧಪಟ್ಟ ದಾಖಲೆಗಳು ಎಂಬುದನ್ನು ತೋರಿಸಲು ನನ್ನ ಹತ್ತಿರ ಇದನ್ನು ಬೇರೆ ದಾಖಲೆಗಳು ಇದಾವೊ ಇಲ್ಲವೊ ಎಂಬುದನ್ನು ನೋಡಿ ಹೇಳಬೇಕಾಗುತ್ತದೆ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ. ನಾನು ನನ್ನ ಅಜ್ಜನ ವಂಶವೃಕ್ಷವನ್ನು ಪಡೆದುಕೊಂಡಿರುವುದಿಲ್ಲ. ನಾನು ತಹಶೀಲ್ದಾರ ಕಚೇರಿಯಿಂದ ನನ್ನ ಅಜ್ಜನವರ ವಾರಿಸ್ಸಾ ದಾಖಲೆಯನ್ನು ಪಡೆದ್ದಿದ್ದು ಇರುವುದಿಲ್ಲ , ಆದರೆ ನನ್ನ ತಂದೆಯವರು ಪಡೆದಿರಬಹುದು. ನಾನು ಅದರ ಬಗ್ಗೆ ಚೌಕಾಸಿ ಮಾಡಿದ್ದು ಇರುವುದಿಲ್ಲ.

ನನ್ನ ಅಜ್ಜನಿಗೆ ಶೋಭಾ ಎಂಬ ಮಗಳಿದ್ದಳು ಎಂಬ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾವು ವಾಂಟಣಿ ಮಾಡಿಕೊಳ್ಳುವಾಗ ಶೋಭಾ ರವರು ಪಕ್ಷಗಾರರು ಆಗಿದ್ದ ಬಗ್ಗೆ ಉದಾಹರಣೆಯಲ್ಲಿ ತೋರಿಸಲು ತೊಂದರೆ ಇತ್ತಾ ಎಂದು ಕೇಳಿದಾಗ , ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂಬುದಾಗಿ ನುಡಿದಿದ್ದಾರೆ. ಕ್ರಯ ದಸ್ತಾವೇಜಿನಲ್ಲಿ ನಾವು ನಮ್ಮ ಅತ್ತೆ ಶೋಭಾ ರವರು ಇದ್ದ ಬಗ್ಗೆ ತೋರಿಸಲು ತೊಂದರೆ ಇರಲಿಲ್ಲ. ಶೋಭಾ ಪ್ರಭಾಕರ ಭಟ್ಟ ರವರು ಆರೋಗ್ಯದಿಂದ ಇದ್ದು , ನ್ಯಾಯಾಲಯದ ಮುಂದೆ ಸಾಕ್ಷಿ ನುಡಿಯಲು ಅವರಿಗೆ ಯಾವುದೇ ತೊಂದರೆ ಇಲ್ಲ.

ನಾವು ಸದರಿ ದಾವೆಗೆ ಉದಾಹರಣೆಯನ್ನು ಸಲ್ಲಿಸುವಾಗ ನನ್ನ ಅಜ್ಜನಿಗೆ ಮಾದೇವಿ ಯಾನೆ ಶೋಭಾ ಎಂಬ ಮಗಳಿದ್ದಳು ಎಂಬುದನ್ನು ಹೇಳಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ನಾರಾಯಣ ಅವರ ಹೆಂಡತಿಯ ಹೆಸರು ವೀಣಾ ಎಂದರೆ ಸರಿ. ಹರ್ಷಿತಾ ರವರು ನಾರಾಯಣ ರವರ ಮಗಳು ಎಂದರೆ ಸರಿ. ಹರ್ಷಿತಾ ರವರಿಗೆ ದಾವಾ ಸ್ಥಳದಲ್ಲಿ ಹಕ್ಕಿಲ್ಲ ಎಂದು ನಾವು ಯಾವತ್ತು ಹೇಳಿದ್ದು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ವೀಣಾ ರವರು ಶಿರಸಿ ನ್ಯಾಯಾಲಯದಲ್ಲಿ 2013-2014 ನೇ ಸಾಲಿನಲ್ಲಿ ವಿಚ್ಛೇದನವನ್ನು ಪಡೆದುಕೊಂಡ ನಂತರ ಸದರಿ ಆಸ್ತಿಗಳಲ್ಲಿ ತನಗೆ ಯಾವುದೇ ಹಕ್ಕಿಲ್ಲ ಎಂಬುದಾಗಿ ಸ್ವತಃ ಅವರೇ ಹೇಳಿದ್ದಾರೆ ಎಂಬುದಾಗಿ ನುಡಿದ್ದಿದ್ದಾರೆ. ಸದರಿ ವಿಚ್ಛೇದನಕ್ಕೆ ಸಂಬಂಧಪಟ್ಟಂತೆ ನಾವು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸಿರಬಹುದು. ಸದರಿ ವಿಚ್ಛೇದನವನ್ನು ಪಡೆಯುವಾಗ ವೀಣಾ ರವರು ಲಿಖಿತವಾಗಿ ತನಗೆ ಯಾವುದೇ ಆಸ್ತಿ ಬೇಡವೆಂದು ಬರೆಸಿದ್ದಾರೆ. ಸದರಿ ಅಂಶವನ್ನು ನಾವು ಉದಾಹರಣೆಯನ್ನು ಸಲ್ಲಿಸುವಾಗ ಹೇಳಿ ಬರೆಸಿದ್ದೇನೆ. ವೀಣಾ ರವರು ತಮ್ಮ ಹಕ್ಕನ್ನು ಬಿಟ್ಟು ಕೊಟ್ಟ ಬಗ್ಗೆ ತೋರಿಸಲು ನಾವು ಯಾವುದೇ ದಾಖಲೆಯನ್ನು ಹಾಜರುಪಡಿಸಿದ್ದು ಇರುವುದಿಲ್ಲ. ಹರ್ಷಿತಾ ರವರು ಅವಾಗ ಹುಬ್ಬಳಿಯಲ್ಲಿ ವಾಸವಾಗಿದ್ದರು.

ವೀಣಾ ರವರು ವಿಚ್ಛೇದನ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುವಾಗ ಯಾವುದೇ ಆಸ್ತಿಗಳನ್ನು ಮಾರಾಟ ಮಾಡದಂತೆ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

ಹರ್ಷಿತಾ ರವರಿಗೆ ದಾವಾ ಸ್ಥಳದಲ್ಲಿ ಯಾವುದೇ ಹಕ್ಕಿರುವುದಿಲ್ಲ. ದಾವಾ ಸ್ಥಳಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳಾಗಿವೆ. ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿ ಎಂಬ ಬಗ್ಗೆ ಉದಾಹರಣೆ ಸಲ್ಲಿಸುವಾಗ ನಮ್ಮ ವಕೀಲರಿಗೆ ಮಾಹಿತಿ ನೀಡಿದ್ದೇವೆ .

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.